**ದಿನಾಂಕ: 16-11-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲು:ಪ್ರತಿವಾದಿ ಪರ ಶ್ರೀ ಎಮ್ ಹೆಚ್ ಎ ವಕೀಲರಿಂದ:**

ನಾನು ಬಿ.ಎ.ಓದಿದ್ದೇನೆ, ನಾನು ಕಳೆದ 15 ವರ್ಷದಿಂದ ನಾನು ದಸ್ತೂರ ಬರಹನಾಗಿ ಕೊಪ್ಪಳದಲ್ಲಿ ಕೆಲಸ ಮಾಡುತ್ತಿದ್ದೇನೆ, ಪ್ರತಿ ವರ್ಷ ನನ್ನ ಲೈಸನ್ಸ ರಿನೆವಲ್ ಮಾಡುತ್ತಾ ಬಂದಿದ್ದೇನೆ. ಸಬ್ ರಿಜಿಸ್ಟರ್ ಮತ್ತು ಡಿಸ್ಟಿಕ್ ರಿಜಿಸ್ಟರ್  ಆ ಕುರಿತು ಮಾಹಿತಿ ಇರುತ್ತದೆ. 2012 ರಲ್ಲಿ ನನ್ನ ಲೈಸನ್ಸ ಚಾಲ್ತಿಯಲ್ಲಿದ್ದ ಕುರಿತು ದಾಖಲೆ ಹಾಕಿಲ್ಲ ಎಂದರೆ ಸರಿ.

2. ನಿಪಿ 1 ಖರೀದಿ ಕರಾರು ಪತ್ರ ನಾನೇ ಬರೆದಿದ್ದೇನೆ, ಇದನ್ನು ಬರೆಯುವಾಗ ಅದರಲ್ಲಿ ಕಾಣಿಸಿದ ಜಮೀನಿನ ಪಹಣಿ ಪತ್ರಿಕೆ, ಮೌಖಿಕವಾಗಿ ಕೊಟ್ಟ ಚಕ್ಕಬಂದಿ ಮತ್ತು ಮೌಖಿಕವಾಗಿ ಒಪ್ಪಿದ ಹಣ ಗಮನಿಸಿ ಈ ಕರಾರು ಪತ್ರ ಬರೆದಿದ್ದೇನೆ.ಬರೆಯುವ ಕಾಲಕ್ಕೆ  ಇನ್ನು ಆಧಾರ ಕಾರ್ಡ ಬಂದಿರಲಿಲ್ಲಾ. ಆದ್ದರಿಂದ ಅವರ ವೂಟಿಂಗ್ ಕಾರ್ಡ ಎಪಿಕ್ ನಂಬರ್ ಕಾಣಿಸಿ ಬರೆದಿದ್ದೇನೆ. ಎಲೆಕ್ಷನ್ ಐಡಿ ಕಾರ್ಡ ಸಹ ನೊಂದಣಿ ಕಾಲಕ್ಕೆ ಹಚ್ಚಿ ಕೊಟ್ಟಿದ್ದೇನೆ,

3. ನಿಪಿ 1 ನ್ನು ನಾನೇ ಬರೆದು ನೊಂದಣಿ ಮಾಡಿಸಿಕೊಟ್ಟಿದ್ದೇನೆ. ನಾನು ನಿಪಿ 1  ಕರಾರು ಪತ್ರ ಬರೆಯುವಾಗ ದಾವೆಯ ಜಮೀನು ದೇವಪ್ಪ ನೀಲಪ್ಪ ಕಿನ್ನಾಳ ಹೆಸರಿಗೆ ಇತ್ತು,  ಅದನ್ನು ಖಾತರಿಪಡಿಸಿಕೊಂಡಿದ್ದೇನೆ, ನಾನು ಕರಾರು ಪತ್ರ ಬರೆಯುವ ಕಾಲಕ್ಕೆ ಕಲಿಕೇರಿ ಗ್ರಾಮ ಜಮೀನು ಸರ್ವೇ ನಂ. 60 ಕ್ಷೇತ್ರ 19 ಎಕರೆ 14 ಗುಂಟೆ ಸಂಪೂರ್ಣವಾಗಿ ದೇವಪ್ಪ ಕಿನ್ನಾಳರವರ ಹೆಸರಿಗೆ ಇತ್ತು, ಪಹಣಿ ಪತ್ರಿಕೆ ನೋಡಿದ್ದೇನೆ,  ಆ ಪೈಕಿ 2 ಎಕರೆ 34 ಗುಂಟೆಗೆ ಸಂಬಂದಪಟ್ಟಂತೆ ಮಾತ್ರ ನಾಗಪ್ಪ ಹಲಗೇರಿ ಇವರ ಹೆಸರಿಗೆ ಬರೆದುಕೊಟ್ಟಿದ್ದೇನೆ.

4. ಪಹಣಿ ಪತ್ರಿಕೆ ಮಾತ್ರ ಪರಿಶೀಲನೆ ಮಾಡಿದ್ದೇನೆ, ಬೇರೆ ದಾಖಲೆ ನೋಡಿಲ್ಲ, 11-ಇ ನಕ್ಷೆ ನೋಡಿಲ್ಲ, ಆಗ ಅದರ ಅವಶ್ಯಕತೆ ಇರಲಿಲ್ಲಾ. ದೇವಪ್ಪನ ಮೂರು ಸಹಿ ಮಾಡಿಸಿದ್ದೇನೆ. ಆಗ ದೇವಪ್ಪನಿಗೆ ಸುಮಾರು ಎಷ್ಟು ವಯಸ್ಸು ಇತ್ತು ಈಗ ಹೇಳಲು ಆಗುವುದಿಲ್ಲ. ಕಣ್ಣಿನ ದೃಷ್ಟಿ ಬಹಳ ಕಡಿಮೆಯಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ಕಣ್ಣು ಸರಿಯಾಗಿ ಕಾಣುತ್ತಿರಲಿಲ್ಲ ಎಂದರೆ ಸರಿಯಲ್ಲ,

5. ದಿಃ- 19-12-2012 ರಂದು ನಿಪಿ 1 ರಂತೆ ಕರಾರು ಪತ್ರ ಬರೆದಾಗ ಸಂಪೂರ್ಣ ಆಸ್ತಿ ದೇವಪ್ಪ ಕಿನ್ನಾಳ ಹೆಸರಿಗೆ ಇರಲಿಲ್ಲಾ ಎಂದರೆ ಸರಿ. ದೇವಪ್ಪನ ಹೆಸರಿಗೆ 2 ಎಕರೆ 34 ಗುಂಟೆ ಮಾತ್ರ ಇತ್ತು, ಉಳಿದ ಆಸ್ತಿ ಬೇರೆಯವರ ಹೆಸರಿಲ್ಲಿ ಇತ್ತು ಎಂದರೆ ಸರಿ. ಅದು ಜಂಟಿ ಪಹಣಿ ಇತ್ತು ಎಂದರೆ ಸರಿ, ಅದು ಪ್ರತ್ಯೇಕ ಪಹಣಿ ಅಲ್ಲಾ ಎಂದರೆ ಸರಿ, ಪಕ್ಷಗಾರರು ಹೇಳಿದ ಪ್ರಕಾರ ನಿಪಿ 1 ರಲ್ಲಿ ಚಕ್ಕಬಂದಿ ಕಾಣಿಸಿದೆ ಎಂದರೆ ಸರಿ.

6. ಸಬ್ ರಿಜಿಸ್ಟರ್ ಆಫೀಸ್ ನಲ್ಲಿ ಸಹಿ ಮಾಡುವಾಗ ದೇವಪ್ಪ, ನಾಗಪ್ಪ ಹಾಗೂ ಇಬ್ಬರು ಸಾಕ್ಷಿದಾರರು ಸಹ ಇದ್ದರು. ಅವರನ್ನು ಬಿಟ್ಟು ಬೇರೆಯವರು ಇರಲಿಲ್ಲಾ ಎಂದರೆ ಸರಿ. ಸಬ್ ರಿಜಿಸ್ಟರ್ ಸಮಕ್ಷಮ ನಾನು ಸಾಕ್ಷಿದಾರರ ಮತ್ತು ಉಭಯ ಪಕ್ಷಗಾರರ ಸಹಿ ಮಾಡಿಸಲಿಲ್ಲಾ ಎಂದರೆ ಸರಿ. ನಾನು ಹೊರಗಡೆ ಸಹಿಗಳನ್ನು ಮಾಡಿಸಿ ನೊಂದಣಿ ಕಾಲಕ್ಕೆ ಉಭಯ ಪಕ್ಷಗಾರರ ಥಂಬ್ ಸಬ್ ರಿಜಿಸ್ಟರ್ ಮುಂದೆ ಮಾಡಿಸಿದ್ದೇನೆ ಎನ್ನುತ್ತಾರೆ.

7. ಸಿಸ್ಟಮ್ ಆಪೇರೇಟರ್ಸ ಅಪರೇಟ್ ಮಾಡುತ್ತಾರೆ ಎಂದರೆ ಸರಿ. ಅಪರೇಟ್ ಮಾಡಿದವನ ಹೆಸರು ನೆನಪಿಲ್ಲ. ಪ್ರೊಸೆಸಿಂಗ್ ಅಪರೇಟರ್ ಮಾಡುತ್ತಾರೆ ಎಂದರೆ ಸರಿ. ನಾನು ನಿಪಿ 1 ರಂತೆ ಖರೀದಿ ಕರಾರು ಪತ್ರ ಬರೆಯಿಸಿ ನೊಂದು ಮಾಡಿಸಿ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಅವರು ನನ್ನ ಕಡೆ ಕ್ಯಾನ್ಸಲೇಷನ್ ಡೀಡ್ ಮಾಡಲು ಬಂದಿದ್ದರು ಎಂದರೆ ಸರಿಯಲ್ಲ.

8. ಈ ಪಾರ್ಟಿಗೆ ನಾನು ಈ ಮೊದಲು ಯಾವುದೇ ಖರೀದಿ ವಚನ ಪತ್ರ ಮಾಡಿ ಕೊಟ್ಟಿರಲಿಲ್ಲಾ. ನಾಗಪ್ಪ ದೇವಪ್ಪನಿಗೆ ಮೋಸ ಮಾಡಲು ಹೋದಾಗ ಅದಕ್ಕೆ ಪೂರಕವಾಗಿ ನಾನು ದಾಖಲೆ ಮಾಡಿದೆ ಎಂದರೆ ಸರಿಯಲ್ಲ. ನಿಪಿ 1 ರ ಸಂಗತಿ ನಾನು ಓದಿ ಹೇಳಿಲ್ಲ ಎಂದರೆ ಸರಿಯಲ್ಲ. ಅದು ದೇವಪ್ಪನಿಗೆ ಮಾಹಿತಿ ಇರಲಿಲ್ಲಾ ಎಂದರೆ ಸರಿಯಲ್ಲ, ದೇವಪ್ಪನಿಗೆ ಓದು ಬರಹ ಬರುತ್ತಿತ್ತು. ದೇವಪ್ಪನಿಗೆ ಖರೀದಿ ಕರಾರು ಪತ್ರ ಬರೆದು ನಾನು ಕೈಯಲ್ಲಿ ಕೊಟ್ಟಿದ್ದೆ, ಆತನೇ ಓದಿಕೊಂಡ, ನಾನು ಓದಿ ಹೇಳಿಲ್ಲ.

9. ಆ ದಿನ ಇದ್ದ ಸಬ್ ರಿಜಿಸ್ಟರ್ ಹೆಸರು ನೆನಪಿಲ್ಲ. ನಾನು ಮತ್ತು ನಾಗಪ್ಪ ಕುತಂತ್ರ ಮಾಡಿ ಆತನಿಗೆ ಗೊತ್ತಿಲ್ಲದೇ, ಮಾಹಿತಿ ಕೊಡದೇ, ಆತನ ಬೆನ್ನ ಹಿಂದೆ, ಆತನಿಗೆ ಮೋಸ ಮಾಡಬೇಕೆಂದು ಸೃಷ್ಟಿ ಮಾಡಿ, ನಾಗಪ್ಪನಿಗೆ ಸಹಾಯ ಮಾಡಿದೆ ಎಂದರೆ ಸರಿಯಲ್ಲ. ನಾನು ಮಾಡಿದ ದಾಖಲೆ ವಿರುದ್ದ ಹೇಳಬಾರದು ಎಂದು ಈಗ ಸುಳ್ಳು ಸಾಕ್ಷಿ ಕೊಡುತ್ತಿದ್ದೇನೆ ಎನ್ನುವುದು ಸರಿಯಲ್ಲ.

10. ನಿಪಿ 1 ನ್ನು ತಯಾರಿಸುವಾಗ ನಿರ್ಲಕ್ಷ್ಯವಹಿಸಿದೆ ಎಂದರೆ ಸರಿಯಲ್ಲ. ಇದು ಡಿಫೆಕ್ಟಿವ್ ದಾಖಲೆ ಎಂದರೆ ಸರಿಯಲ್ಲ, ಅದು ಕಾನೂನುಬದ್ದವಾಗಿಲ್ಲ ಎನ್ನುವುದು ಸರಿಯಲ್ಲ. ಯಾವುದೇ ದಾಖಲಾತಿಗಳನ್ನು ಸರಿಯಾಗಿ ಪರಿಶೀಲಿಸಿಲ್ಲಾ ಎಂದರೆ ಸರಿಯಲ್ಲ.

<u>ಮರು ವಿಚಾರಣೆ: ಇಲ್ಲ</u>

(ಸಾಕ್ಷಿಯು ನುಡಿದಂತೆ ನನ್ನ ಉಕ್ತ ಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ.
ಸಹಿ/-
**ಹಿರಿಯ ವ್ಯವಹಾರ ನ್ಯಾಯಾಧೀಶರು,**
**ಕೊಪ್ಪಳ.**